ಡೋಂಟ್‌ಬಾದರ್. ಮುಂದೆ ಬ್ರೈಟ್ ಫ್ಯೂಚರ್ ಬೇಕಂದ್ರೆ ನನ್ನ ಫ್ಲ್ಯಾಟ್‌ಗೆ ಬಂದು ಫ್ಲಾಟ್ ಆಗಿ. ಮಜಾ ಕೊಟ್ಟವರಿಗೆ ನಾನೆಂದೂ ಅನ್ಯಾಯ ಮಾಡೋ ಗಿರಾಕಿಯಲ್ಲ... ಯು ನೊ?' ನನ್ನ ಹಸ್ತಗಳನ್ನು ಹಿಡಿದು ಹಣೆಗೆ ಒತ್ತಿಕೊಂಡು ಚುಂಬಿಸುತ್ತಾನೆ. 'ಗೊತ್ತಿದ್ದೂ ಲವ್‌ನ ನಾಟಕ ಮಾಡಿದ್ರಾ ನನ್ನ ಹತ್ತಿರ?' ಬುಸುಗುಟ್ಟುವೆ. 'ಆಂಟಿಯರೆಂದ್ರೆ ನಂಗೆ ತುಂಬಾ ಇಷ್ಟ ಕಣ್ರಿ. ಅದು ಹೋಗ್ಲಿ ಮದುವೆಯಾದ ಪತಿವ್ರತೆ ನೀವೂ ಏಕೆ ಇಂತಹ ಡ್ರಾಮಾ ಮಾಡಿದ್ರಿ?' ವ್ಯಂಗ್ಯದಿಂದ ಇರಿಯುತ್ತಾನೆ ಕಣ್ಣುಗಳಲ್ಲಿ. 'ಎಲ್ಲಾ ಇದ್ದೂ ಏನೂ ಇಲ್ಲದವಳು ನಾನು. ಪ್ರೀತಿಗಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದವಳು ನಾನು. ನೀವೂ ನನಗಾಗಿ ಹಂಬಲಿಸೋದನ್ನು ಕಂಡೆ. ಹೆದರುತ್ತಲೇ ನಿಮ್ಮ ಪಾಶಕ್ಕೆ ಬಿದ್ದೆ. ನೀವಿಲ್ಲದೆ ಬದುಕಲಾರೆನೆಂಬಷ್ಟು ಡಿಸ್ಟರ್ಬ್ ಆದೆ. ನೀವು ಒಪ್ಪೋದಾದ್ರೆ ಈಗ್ಲೂ ನನ್ನ ಕುಡುಕ ಗಂಡನಿಂದ ಡಿವೋರ್ಸ್‌ಗೆ ಸಿದ್ಧ ನಾನು' ತೊದಲಿದೆ.

'ಸ್ಟುಪಿಡ್... ಇಷ್ಟೆಲ್ಲಾ ರಿಸ್ಕ್ ಯಾಕೇರೀ? ಮೈಗೊಬ್ಬ ಒಡೆಯ, ಮನೆಗೊಬ್ಬ ಒಡೆಯ ಅಂದ್ಕೊಳಿ. ಪ್ರಾಬ್ಲಂ ಫಿನಿಶ್. ಪ್ರೀತಿಯಲ್ಲಿ ಯಾವುದೂ ಅನೈತಿಕವಲ್ಲಾರೀ' ನಕ್ಕ. 'ಶಟ್‌ಅಪ್. ಹೆಂಗಸರ ಬಗ್ಗೆ ಇಷ್ಟು ಚೀಪ್ ಮೆಂಟಾಲಿಟಿನಾ ನಿನ್ಗೆ? ಯು ಎಜುಕೇಟೆಡ್ ಬ್ರೂಟ್' ಸರಕ್ಕನೆ ಮೇಲೇಳುವೆ; 'ನನ್ನ ಗಂಡ ಕುಡುಕ ನಿಜ. ಕೆಡುಕ ಅಲ್ಲ' ಅನ್ನುವೆ. 'ಕೂಗಾಡ್ಬೇಡ ಸ್ವೀಟಿ. ಇಲ್ಲಿ ವಿಐಪಿಗಳು ಮಾತ್ರ ಬರ್ತಾರೆ' ಎನ್ನುತ್ತಾನೆ. ದೊಡ್ಡ ದೊಡ್ಡ ತಟ್ಟೆಗಳು ತರಾವರಿ ಬಟ್ಟಲುಗಳಲ್ಲಿ ಅಲಂಕೃತ ಖಾದ್ಯಗಳು ಬಂದು ಕೂರುತ್ತವೆ. 'ಮೈ ಫೂಟ್...' ಕೆಂಡಕಾರುವೆ. 'ಡೋಂಟ್ ಬಿ ರಬ್ಬಿಶ್... ಇಷ್ಟವಿಲ್ಲದಿದ್ದರೆ ಇಲ್ಲ ಅನ್ನು. ಹಾಯಾಗಿ ಊಟ ಮಾಡ್ಕೊಂಡು ಎದ್ದು ಹೋಗ್ತಿರು, ಅಷ್ಟೆ' ಏನೂ ನಡದೇ ಇಲ್ಲವೇನೋ ಎಂಬಂತಹ ಉದಾಸೀನತೆ! ಸೋಫಾ ಸರಿಸಿ ಹೊರಡುತ್ತೇನೆ. 'ಯು ಸೀ ಮಿಸ್ ರಂಜನಿದೇವ್, ನಾನು ಒಂದ್ಸಲ ಬಲವಂತವಾಗಿ ನನ್ನ ಚೇಂಬರಲ್ಲಿ ನಿಮಗೆ ಕಿಸ್ ಮಾಡಿದ್ದೆ... ಫುಲ್ ಮೀಲ್ಸ್ ಬೇಡ್ವಾ?' ಅಪರಾಧಿಭಾವವೇ ಇಲ್ಲದೆ ಹಂಗಿಸುತ್ತಾನೆ. 'ಹೇಸಿಗೆಯ ಮೇಲೆ ಕೂತ ನೊಣ ಬಂದು ತುಟಿಗಳ ಮೇಲೇ ಕೂತ್ಕೋತು ಅಂತ ಯಾರಾದ್ರೂ ತುಟಿಗಳನ್ನೇ ಕತ್ತರಿಸಿಕೊಳ್ತಾರೇನೋ ಡರ್ಟಿಡಾಗ್?' ಕೆನ್ನೆಗೆ ರಾಚಿದಂತೆ ಸಿಡಿಯುತ್ತೇನೆ. 'ಒಂದ್ನಿಮಿಷ ಪ್ಲೀಸ್' ಹಿಂದೆಯೇ ಬರುತ್ತಾನೆ. 'ನನ್ನನ್ನು ಎದುರು ಹಾಕಿಕೊಂಡು ನೀನು ಕಂಪೆನಿಯಲ್ಲಿ ಕೆಲಸ ಮಾಡೋಕೆ ಸಾಧ್ಯವೇನೆ? ಥಿಂಕ್ ಬಿಫೋರ್ ದಿ ಸ್ಟೆಪ್' ದುರುಗುಟ್ಟುತ್ತಾನೆ. 'ಹೋಗಲೋೀ, ನಿಂದಲ್ಲದಿದ್ದರೆ ಇನ್ನೊಂದು ಕಂಪೆನಿ... ನಾಯಿ ತರಾ ಹಿಂದೆ ಬರ್ಬೇಡ... ಗೇಟ್‌ಲಾಸ್ಟ್' ಗದರಿ ಹೆಜ್ಜೆಗಳಲ್ಲಿ ಕಸುವು ತುಂಬಿಕೊಳ್ಳುತ್ತೇನೆ.

## ಬಿ.ಎಲ್. ವೇಣು

ಬಂಡಾಯದ ಕತೆ, ಕಾದಂಬರಿಗಳಿಂದ ತಮ್ಮ ಬರವಣಿಗೆ ಆರಂಭಿಸಿದವರು ವೇಣು. 35ಕ್ಕೂ ಹೆಚ್ಚು ವರ್ಷಗಳಿಂದ ಸಿನಿಮಾ, ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಏಳು ಐತಿಹಾಸಿಕ ಕಾದಂಬರಿಗಳು ಸೇರಿದಂತೆ 29 ಕಾದಂಬರಿಗಳನ್ನು ಅವರು ಬರೆದಿದ್ದಾರೆ. 'ಗಂಡುಗಲಿ ಮದಕರಿನಾಯಕ' ಅಪಾರ ಜನಮನ್ನಣೆ ಗಳಿಸಿದ ಐತಿಹಾಸಿಕ ಕಾದಂಬರಿ. 'ಲೋಕದಲ್ಲಿ ಜನಿಸಿದಾ ಬಳಿಕ...' ಅವರ ಆತ್ಮಕತೆ. ಅವರ ಸುಮಾರು 45 ಕೃತಿಗಳು ಪ್ರಕಟಗೊಂಡಿದ್ದು, 11 ಕೃತಿಗಳು ಸಿನಿಮಾ ಆಗಿವೆ. ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ವೇಣು, ಚಿತ್ರದುರ್ಗದಲ್ಲಿ ನೆಲೆಸಿದ್ದಾರೆ.